

# ಪಿಂಗಾಣಿಯ ಅಪೂರ್ವ ಕಲಾಲೋಕ

(8ನೇ ಪುಟದಿಂದ)

ವಿಷಾದದ ಸಂಗತಿಯೆಂದರೆ ದಿನೇ ದಿನೇ ಪಿಂಗಾಣಿ ವಸ್ತುಗಳ ವ್ಯಾಪಾರ ಕಡಿಮೆಯಾಗುತ್ತಿದೆ. ಹೊರ ರಾಷ್ಟ್ರಗಳಲ್ಲಿ ಇವುಗಳ ಬೇಡಿಕೆಯೂ ಕುಗ್ಗುತ್ತಿದೆ. ಬೇಡಿಕೆ ಕುಸಿತಕ್ಕೆ ಕಾರಣವೆಂದರೆ ಇವುಗಳ ಬಾಳಿಕೆ ಕಡಿಮೆ. ಇದಕ್ಕೆ ಪರ್ಯಾಯವಾಗಿ ಒಡೆಯದ, ಬಿಸಿಯನ್ನು ತಾಳಿಕೊಳ್ಳುವ ಗ್ಲಾಸ್ ಮತ್ತು ಪ್ಲಾಸ್ಟಿಕ್ ವಸ್ತುಗಳು ಎಲ್ಲೆಡೆ ಹರಡಿಕೊಂಡು ಆಕ್ರಮಣ ಮಾಡಿವೆ. ಅದೂ ಅಲ್ಲದೆ ಆಧುನಿಕ ಮನೆಗಳು ಚಿಕ್ಕದಾಗಿದ್ದರಿಂದ ಪಿಂಗಾಣಿಯ ಅಲಂಕಾರಿಕ ವಸ್ತುಗಳನ್ನು ಓರಣವಾಗಿಡಲು ಸ್ಥಳದ ಕೊರತೆಯೂ ಇದೆ. ಪಿಂಗಾಣಿ ವಸ್ತುಗಳು ಒಡೆಯದಂತೆ ಅಂಗಡಿಗಳಲ್ಲಿ ಎತ್ತುವುದು ಮತ್ತು ಇಳಿಸುವುದಕ್ಕೆ ದಕ್ಷ ಸೇವಕರು ಬೇಕಾಗುತ್ತಾರೆ. ಏರುತ್ತಿರುವ ಅಂಗಡಿಗಳ ಬಾಡಿಗೆ ಮುಂತಾದ ಕಾರಣಗಳಿಂದಾಗಿ ಮಳಿಗೆದಾರರಿಗೆ ಅದೂ ಸಾಧ್ಯವಾಗುತ್ತಿಲ್ಲ.

ಉತ್ಪಾದಕರು ಬೇಡಿಕೆಗಳನ್ನು ಕುದುರಿಸಲು ಹೊಸ ಪ್ರಯತ್ನಗಳನ್ನು ನಡೆಸಿದ್ದಾರೆ. ಪಿಂಗಾಣಿಯ ಬಾಳಿಕೆ ಹೆಚ್ಚಿಸಿ ಕಲೆಗಾರಿಕೆಯಲ್ಲಿ ಆಧುನಿಕ ವರ್ಣವಿನ್ಯಾಸಗಳನ್ನು ಅಳವಡಿಸಿದ್ದರಿಂದ ಪಿಂಗಾಣಿ ವಸ್ತುಗಳ ಪುರಾತನ ಪರಂಪರೆ ಸಂಪೂರ್ಣವಾಗಿ ನಶಿಸಿಹೋಗದೆ ಜೀವಂತವಾಗಿ ಉಳಿದುಕೊಂಡಿದೆ.

ಪಿಂಗಾಣಿ ಬಳಕೆ ಕೆಲ ಆಯಕಟ್ಟಿನ ಸ್ಥಳಗಳಲ್ಲಿ ಈಗಲೂ ಜನಪ್ರಿಯ. ಉದಾಹರಣೆಗೆ ಹೈವೋಲ್ಟೇಜ್ ಕೇಬಲ್‌ಗಳ ಬಳಕೆಯಲ್ಲಿ ಮತ್ತು ವಿದ್ಯುತ್ತಿನ ಟ್ರಾನ್ಸ್‌ಫಾರ್ಮರ್‌ಗಳಲ್ಲಿ, ಅಲ್ಲದೆ ನವಗ್ರಹ ನಿರ್ಮಾಣದ ಕಲಾತ್ಮಕ ವಿನ್ಯಾಸಗಳಲ್ಲಿ ಪಿಂಗಾಣಿ ಉಪಕರಣಗಳ ಬಳಕೆ ಹೆಚ್ಚು.

ಪಿಂಗಾಣಿ ಪಾತ್ರೆಗಳ ತಯಾರಿಕೆಯಲ್ಲಿ ಮುಖ್ಯವಾಗಿ ಎರಡು ಮೂಲ ದ್ರವ್ಯಗಳಿವೆ. ಕೇಯಾಲಿನ (kaolin) ಮತ್ತು ಪೆಟುನ‌ಟ್ಸೆ (petuntse) ಎಂದರೆ ಗ್ರಾನೈಟಿನ ಪಳೆಯುಳಿಕೆ. ಟಾಂಗ್ ರಾಜವಂಶದ (ಕ್ರಿ.ಶ. 618– 907) ಆಳ್ವಿಕೆಯ ಕಾಲದಲ್ಲಿ ಪೋರ್ಸೆಲಿನ್ನಿನ ಮೊಟ್ಟಮೊದಲ ಶೋಧವಾಗಿ ಇದರ ಬಳಕೆ ಶುರುವಾಗಿತ್ತು. ಆದರೂ ಪೋರ್ಸೆಲಿನ್ ಶಬ್ದವು ಮೂಲತಃ ಹಳೆಯ ಇಟಾಲಿಯನ್ ಶಬ್ದ. ಇಟಾಲಿಯನ್ ಭಾಷೆಯಲ್ಲಿ ಇದರರ್ಥ ಸಮುದ್ರದಲ್ಲಿ ಸಿಗುವ ಕವಡೆ ಅಥವಾ ಶಿಂಪು. ಪಿಂಗಾಣಿಯು ಕವಡೆ ಅಥವಾ ಶಿಂಪಿನ ಮೇಲ್ಭಾಗದಂತೆ ಇರುವುದರಿಂದ ಈ ಹೆಸರು ಬಂದಿರಬಹುದು.

ಇತಿಹಾಸಕಾರರು ದಾಖಲಿಸಿದಂತೆ ಮಾರ್ಕೋಪೋಲೋ ಚೈನಾ ಪ್ರವಾಸದಲ್ಲಿದ್ದಾಗ ಕೆಲವಸ್ತುಗಳನ್ನು ಕಂಡು ಪೋರ್ಸೆಲಿನ್ ಎಂದು ಕರೆದನಂತೆ. ಏನಿದ್ದರೂ ಇವತ್ತು ಜಗತ್ತಿನಾದ್ಯಂತ ಬಳಸಲಾಗುತ್ತಿರುವ ಪೋರ್ಸೆಲಿನ್ ಶಬ್ದಕ್ಕೆ ಪರ್ಯಾಯ ಪದ ಚೀನೀ ಮಣ್ಣಿನ ವಸ್ತು ಎಂದೇ ತಿಳಿಯಲಾಗುತ್ತದೆ. ಕುತೂಹಲದ ಸಂಗತಿಯೆಂದರೆ ಪಿಂಗಾಣಿ ವಸ್ತುಗಳ ತಯಾರಿಕೆಯಲ್ಲಿ ಎಲುಬನ್ನು ಸುಟ್ಟ ಬೂದಿಯನ್ನು ಬಳಸಲಾಗುತ್ತದೆ. ಈ ಕಾರಣದಿಂದಾಗಿ ಪಿಂಗಾಣಿ ವಸ್ತುಗಳಿಗೆ ತಾಳಿಕೆಯ ಗುಣವಿದೆ.

ಭಾರತ ಮತ್ತು ಚೈನಾ ದೇಶಗಳಲ್ಲಿ ಸುಮಾರು 8ನೇ ಶತಮಾನದಿಂದ 18ನೇ ಶತಮಾನದವರೆಗೂ ನಡೆದ ವಹಿವಾಟುಗಳಲ್ಲಿ ಪಿಂಗಾಣಿ ವಸ್ತುಗಳ ಸರಬರಾಜು ಮುಖ್ಯವಾಗಿತ್ತು ಎನ್ನಲು ವಿವಿಧ ಕಾಲದಲ್ಲಿ ಮಾಡಿದ ಉತ್ಖನನಗಳು ಸಾಕ್ಷಿ ಒದಗಿಸಿವೆ. ಈ ಉತ್ಖನನ ಕಾರ್ಯಗಳಲ್ಲಿ ಭಾರತದ ಕರಾವಳಿ ಪ್ರದೇಶಗಳಲ್ಲಿ ಮತ್ತು ಭಾರತಚೈನಾ ವ್ಯಾಪಾರ ವಹಿವಾಟಿನ ರಸ್ತೆಗಳಲ್ಲಿ ಪಿಂಗಾಣಿ ವಸ್ತುಗಳ ತುಂಡುಗಳು ಸಿಕ್ಕಿವೆ. ಅದರಲ್ಲೂ ದೊಡ್ಡ ಪ್ರಮಾಣದಲ್ಲಿ ನೀಲಿ ಮತ್ತು ಬಿಳಿ ಬಣ್ಣದ ಪಿಂಗಾಣಿ ವಸ್ತುಗಳು! ಭಾರತ ಮತ್ತು ಚೈನಾ ದೇಶಗಳ ನಡುವೆ ದೊಡ್ಡ ಮಟ್ಟದ ವ್ಯಾಪಾರ ನಡೆಯುತ್ತಿತ್ತು ಎನ್ನುವುದಕ್ಕೂ ಇದು ಸಾಕ್ಷಿ.

ಪಿಂಗಾಣಿ ಮಣ್ಣಿನ ಉತ್ಖನನ ದಿನಗಳಿಂದ ಹಿಡಿದು, ಇಂದಿನವರೆಗೂ ಈ ವಸ್ತುಗಳನ್ನು ಪ್ರೀತಿಯಿಂದ ಸಂಗ್ರಹಿಸಿದ ಕಲಾಕಾರರು, ರಸಿಕರು, ಕವಿಗಳು ಜಗತ್ತಿನಾದ್ಯಂತ ಇದ್ದಾರೆ. ಈ ವಸ್ತುಗಳಲ್ಲಿ ಅಪ್ರತಿಮ ಕಲೆಗಾರಿಕೆ, ಆಕಾರ ಮತ್ತು ವೈವಿಧ್ಯಮಯ ವಿನ್ಯಾಸಗಳು ಇದಕ್ಕೆ ಕಾರಣ. ಪಿಂಗಾಣಿ ಕಲೆ ಇಡೀ ಮಾನವತೆಗೆ ನೀಡಿದ ಒಂದು ಅಪರೂಪದ ಕೊಡುಗೆ ಎನ್ನಬಹುದು.

ಜಗತ್ತಿನ ಯಾವುದೇ ವಸ್ತುಸಂಗ್ರಹಾಲಯದಲ್ಲಿ ಪಿಂಗಾಣಿ ವಸ್ತುಗಳಿಲ್ಲದೇ ಇರುವುದು ತುಂಬ ವಿರಳ. ಏಷ್ಯನ್ ಸಿವಿಲೈಸೇಷನ್ ಮ್ಯೂಸಿಯಂ, ಸಿಂಗಾಪೂರದ ನ್ಯಾಶನಲ್ ಮ್ಯೂಸಿಯಂ, ಬೀಜಿಂಗ್‌ನ ಪ್ಯಾಲೇಸ್ ಮ್ಯೂಸಿಯಂ, ತೈಪೆ ಯಲ್ಲಿರುವ ನ್ಯಾಶನಲ್ ಪ್ಯಾಲೇಸ್ ಮ್ಯೂಸಿಯಂ, ಹೈದ್ರಾಬಾದ್‌ನ ಸಾಲಾರ್‌ಜಂಗ್ ಮ್ಯೂಸಿಯಂ ಹೀಗೆ ಎಲ್ಲೆಡೆ ಪಿಂಗಾಣಿ ಕಲೆಯ ಅಪರೂಪದ ವಸ್ತುಗಳಿವೆ. ಚೀನೀ ಮಣ್ಣಿನಿಂದ ತಯಾರಾದ ಅಸಂಖ್ಯ ವಸ್ತುವೈವಿಧ್ಯವನ್ನು ಈ ವಸ್ತು ಸಂಗ್ರಹಾಲಯಗಳಲ್ಲಿ ಕಾಣಬಹುದು. ಪೂರ್ವ ಚೀನಾದ ಜಂಗ್ಡೆನ್‌ಝೆನ್ ಪ್ರಾಂತ್ಯದಲ್ಲಿರುವ **The new Jingdezhen china porcelain museum 2015**ರ ಅಕ್ಟೋಬರ್ನಲ್ಲಿ ಉದ್ಘಾಟನೆ ಆಗಿದ್ದು ಜಗತ್ತಿನಲ್ಲಿಯೆ ಶ್ರೇಷ್ಠವಾದ ಪಿಂಗಾಣಿ ವಸ್ತುಸಂಗ್ರಹಾಲಯ ಎನ್ನಬಹುದು. ಪಿಂಗಾಣಿ ವಸ್ತುಗಳ ತವರಿನಲ್ಲಿರುವ ಈ ಜಗದ್ವಿಖ್ಯಾತ ವಸ್ತು ಸಂಗ್ರಹಾಲಯವು ಚೀನಾದ ಪುರಾತನ ಪರಂಪರೆಯನ್ನು ಸುರಕ್ಷಿತವಾಗಿಟ್ಟುಕೊಂಡ ಅವಿಸ್ಮರಣೀಯ ಚಾರಿತ್ರಿಕ ತಾಣವೂ ಹೌದು.